*

**ಓಎಸ್ ನಂಃ 1/2019**
**ಪಿಡಬ್ಲೂಃ 1**

**ಸಾಕ್ಷಿಗೆ ದಿನಾಂಕ 12-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಜಿ.ಎಸ್.ಹೆಚ್. ವಕೀಲರಿಂದ

ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಒಕ್ಕಲುತನ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. ನನಗೆ ಸ್ವಂತ ಜಮೀನು ಇದೆ. ನನ್ನ ಪಾಲಿಗೆ 13 ಎಕ್ರೆ ಆಸ್ತಿ ಪಾಲು ವಿಭಾಗದಲ್ಲಿ ಬಂದಿರುತ್ತದೆ. ನೀವು ಬ್ಯಾಂಕಿನಲ್ಲಿ ಸಾಲ ಕೊಡಿಸುವ ಮಧ್ಯವರ್ತಿ ಕೆಲಸ ಮಾಡುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಪ್ರತಿವಾದಿ ಕುಟುಂಬಕ್ಕೆ ಸಾಲ ಇದ್ದ ಕಾರಣ ಆತ ದಾವಾ ಆಸ್ತಿಯನ್ನು ನಿಮಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದಾನೆಂದು ನಮೂದು ಮಾಡಿದ್ದೀರಿ ಎಂದರೆ ಸಾಕ್ಷಿ ಒಪ್ಪಂದ ಮಾಡಿಕೊಂಡಿದ್ದು ನಿಜ ಆದರೆ ಸಾಲದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರತಿವಾದಿ ಕುಟುಂಬದವರು ಯಾರಿಂದ ಸಾಲ ಪಡೆದಿದ್ದರು ಎಂದು ಗೊತ್ತಿಲ್ಲ.

ಈ ದಾವೆಯನ್ನು ಸರ್ವೆ ನಂಬರ್ 119/6 ಒಂದು ಎಕ್ರೆ 25 ಗುಂಟೆ ಕ್ಷೇತ್ರಕ್ಕೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯು ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ಸರಿ. ಪ್ರತಿವಾದಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಮಕ್ಕಳು ಇದ್ದ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿಗೆ ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇನೆಂದು ದಿಃ 06.08.2015ರಂದು ಮೊಗಲಾ ಗ್ರಾಮದಲ್ಲಿ ನನ್ನ, ಕಾಶಿನಾಥ್ ಮತ್ತು ನಾಗೇಂದ್ರರವರ ಸಮಕ್ಷಮ ಹೇಳಿರುತ್ತಾನೆ. ನನ್ನ ಮತ್ತು ಪ್ರತಿವಾದಿಯ ನಡುವೆ ಈ ವ್ಯವಹಾರದ ಕುರಿತು ಮಾತುಕತೆಯು ಸಾಧು ಮುತ್ಯರ ಗುಡಿಯಲ್ಲಿ ಕಾಶಿನಾಥ್ ಮತ್ತು ನಾಗೇಂದ್ರರವರ ಸಮಕ್ಷಮ ಆಗಿರುತ್ತದೆ. ನಾವು ಸದರಿ ಗುಡಿಯಲ್ಲಿ ಮಾತುಕತೆ ಆದ ನಂತರ ಯಾವುದೇ ಕಾಗದ ಪತ್ರ ಬರೆದಿಲ್ಲ. ಪ್ರತಿವಾದಿಯ ಅಣ್ಣನಿಗೂ ಸಹ ಮಾತುಕತೆ ಸಮಯದಲ್ಲಿದ್ದ ದೂರವಾಣಿ

ಮುಖಾಂತರ ಮಾತನಾಡಿದೆ ಎಂದು ನುಡಿಯುತ್ತಾರೆ. ನಾವು ಮಾತುಕತೆಯನ್ನು ದಾವಾ ಆಸ್ತಿಗೆ ರೂ.2,50,000/-ದಂತೆ ವ್ಯವಹಾರ ಮಾಡಿರುತ್ತೇವೆ. ನೀವು ದಾವಾ ಆಸ್ತಿಯನ್ನು ರೂ.2,50,000/-ಕ್ಕೆ ಖರೀದಿ ಮಾಡುತ್ತೇನೆಂದು ಯಾವುದೇ ಮಾತುಕತೆ ಮಾಡಿಲ್ಲ ಎಂದರೆ ಸರಿಯಲ್ಲ. 2010ರಲ್ಲಿ ಮೊಗಲಾ ಮತ್ತು ಇಟಗಿ ಗ್ರಾಮದಲ್ಲಿನ ಜಾಗಗಳನ್ನು ಸಿಮೆಂಟ್ ಫ್ಯಾಕ್ಟರಿಯವರು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ಮೊಗಲಾ ಗ್ರಾಮದಲ್ಲಿ ಯಾವುದೇ ಜಾಗವನ್ನು ಅವರು ಖರೀದಿ ಮಾಡಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.